ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮಂ/07/ಜಾ.ಕೋ/2015-16/ 4913 ದಿನಾಂಕ: - 2 DEC 2015

ದಿನಾಂಕ:02.12.2015ರಂದು 3ನೇ ಮಹಡಿ, ಸಭೆಯ ಸಭಾಂಗಣ, ಪರಿಸರ ಭವನ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬೆಂಗಳೂರಿನಲ್ಲಿ, ನಡೆದ 7ನೇ ಜಾಗೃತಿ ಸಮಿತಿಯ ಸಭೆಯ ನಡವಳಿ,

***************

ಅಧ್ಯಕ್ಷತೆ: ಶ್ರೀ.ಮೋಹನ್ ಕುಮಾರ್ ಕೊಂಡಜ್ಜಿ. – ಅಧ್ಯಕ್ಷರು

ಉಪಸ್ಥಿತ ಸದಸ್ಯರು:

1) ಡಾ. ಜೈಪ್ರಕಾಶ್ ಆಳ್ವ, – ಸದಸ್ಯರು
2) ಶ್ರೀ. ಜೆ. ಜಿ. ಕಾವೇರಿಯಪ್ಪ. – ಸದಸ್ಯರು
3) ಶ್ರೀ. ವೆಂಕಟೇಶ್ ಶೇಖರ್, ಹಿ.ಪ.ಅ. ತರಬೇತಿ ಮತ್ತು ಜಾಗೃತಿ ಕೋಶ, ಕೇಂದ್ರ ಕಛೇರಿ, ಕ.ರಾ.ಮಾ.ನಿ.ಮಂ. – ಸಂಚಾಲಕರು

ಉಪಸ್ಥಿತ ಆಹ್ವಾನಿತರು:

1) ಶ್ರೀ. ನಾಗೇಶ್ ಹೆಗಡೆ.
2) ಡಾ. ಕೇಶವ್.ಎ.ಬುಲ್‌ಬುಲೆ.
3) ಶ್ರೀಮತಿ. ಸುಮಂಗಲ ಮಮ್ಮಿಗಟ್ಟಿ.
4) ಡಾ. ರಮೇಶ್ ಕಾಮತ್.
5) ಶ್ರೀ. ಟಿ. ರವೀಂದ್ರ ಪಾಟೀಲ್.

ಉಪಸ್ಥಿತ ಅಧಿಕಾರಿಗಳು:

1) ಶ್ರೀಮತಿ. ವಿಜಯ ಹೆಗಡೆ, ಪ.ಅ. ಕ.ರಾ.ಮಾ.ನಿ.ಮಂ.
2) ಶ್ರೀ. ಕೆ. ಎಸ್. ಕಿರ್‌ಣ್, ಸಾ.ಸ.ಅ., ಕ.ರಾ.ಮಾ.ನಿ.ಮಂ.
3) ಶ್ರೀ. ಬಿ. ಕೆ. ಸಂತೋಷ್, ಸ.ಪ.ಅ., ಕ.ರಾ.ಮಾ.ನಿ.ಮಂ.
4) ಶ್ರೀಮತಿ. ನಿರ್ಮಲಾ ದೇವಿ, ಸ.ಆ.ಅ., ಕ.ರಾ.ಮಾ.ನಿ.ಮಂ.
5) ಶ್ರೀ.ಸಶಿ ಕುಮಾರ್, ದ್ವಿ.ದ.ಸ., ಕ.ರಾ.ಮಾ.ನಿ.ಮಂ

ಅನುಪಸ್ಥಿತ ಆಹ್ವಾನಿತರು:

1) ಡಾ. ಲಕ್ಷ್ಮಿಕಾಂತ್.

-----

ಸಂಚಾಲಕರು, ಜಾಗೃತಿ ಸಮಿತಿ,ಇವರು, ಅಧ್ಯಕ್ಷರನ್ನು, ಸದಸ್ಯರುಗಳನ್ನು ಮತ್ತು ಆಹ್ವಾನಿತರನ್ನು 7ನೇ ಜಾಗೃತಿ ಸಮಿತಿಯ ಸಭೆಗೆ ಸ್ವಾಗತಿಸಿದರು ಹಾಗೂ ಸಂಸ್ಥೆಗಳು ಸಲ್ಲಿಸಿದ ಪ್ರಸ್ತಾಪಗಳನ್ನು ಮತ್ತು ಇತರೆ Agendaದ ವಿಷಯಗಳನ್ನು ವಿವರಿಸಿದರು.

ಅಧ್ಯಕ್ಷರು, ಜಾಗೃತಿ ಸಮಿತಿ, ಕೆಳಕಂಡ ವಿಷಯಗಳನ್ನು ಚರ್ಚಿಸಿ ಸೂಕ್ತ ನಿರ್ಧಾರಗಳನ್ನು ನೀಡಿದರು.

| ವಿಷಯ ಸಂಖ್ಯೆ: | ವಿಷಯ | ಜಾಗೃತಿ ಸಮಿತಿಯ ನಿರ್ಧಾರಗಳು |
|---|---|---|
| 7.1 | **ಮಂಡಳಿಯ ಪರಿಸರ ವಾಹಿನಿ ಮತ್ತು ಮರಿದುಂಬಿ ಪತ್ರಿಕೆಗೆ ಮಾಧ್ಯಮ ಸಲಹೆಗಾರರನ್ನು ನೇಮಕಾತಿ ಮಾಡಿರುವ ಬಗ್ಗೆ.**<br>ಮಂಡಳಿಯಿಂದ ದಿನಾಂಕ:03.11.2015ರಂದು ಪರಿಣಿತ ಮಾಧ್ಯಮ ಸಲಹೆಗಾರರಾದ ಶ್ರೀ.ನಾಗರಾಜ.ಆರ್.ಜಿ.ಹಳ್ಳಿರವರನ್ನು ಮಾಧ್ಯಮ ಸಲಹೆಗಾರರನ್ನಾಗಿ ಒಂದು ವರ್ಷದವರೆಗೆ ನೇಮಿಸಲಾಗಿದೆ. ಇವರನ್ನು ಮಾನ್ಯ ಬೇಲೂರು ಸುದರ್ಶನ್‌ರವರ ಸ್ಥಾನಕ್ಕೆ ನೇಮಿಸಲಾಗಿದೆ. ಇವರ ಸೇವೆಯನ್ನು ಪರಿಸರವಾಹಿನಿ, ಮರಿದುಂಬಿ-ಪತ್ರಿಕೆಗಳನ್ನು ತಯಾರಿಸಲು ಮತ್ತು ಇತರೇ ಮಾಧ್ಯಮ ಕೆಲಸಗಳಲ್ಲಿ (PRO & SEO (ಪರಿಸರ ಜಾಗೃತಿ) ಇವರೊಂದಿಗೆ ಸಹಕರಿಸಲು ಯೋಜಿಸಿರುತ್ತದೆ. ಇವರ ಬಗ್ಗೆ ಸಮಿತಿಗೆ ಪರಿಚಯ ಹಾಗೂ ಸದರಿಯವರಿಗೆ ಜವಾಬ್ದಾರಿವಹಿಸಬೇಕಾಗಿರುವ ಬಗ್ಗೆ ಚರ್ಚೆ.<br><br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | 1) ಪರಿಸರ ವಾಹಿನಿ ಜನವರಿ ಸಂಚಿಕೆ ಮತ್ತು 2016ನೇ ವರ್ಷದ ಕ್ಯಾಲೆಂಡರ್‌ನ್ನು ಸಿದ್ಧಪಡಿಸುವುದು.<br>2) ಪರಿಸರ ವಾಹಿನಿಯ ಪುಟ ವಿನ್ಯಾಸವನ್ನು (ಡಿಸೈನ್ ಲೇಔಟ್) ಸಂಬಂಧ ಪಟ್ಟ ಕಲಾವಿದರಿಂದ ಮೂಡಿಸುವುದು.<br>3) ಪರಿಸರ ವಾಹಿನಿ ಪತ್ರಿಕೆಯನ್ನು ಭಾರತೀಯ ಪತ್ರಿಕೆಯ ನಿಯಮದ ಪ್ರಕಾರ ದೆಹಲಿಗೆ ಕಳುಹಿಸಿ ನೋಂದಣಿಯನ್ನು (ನೋಂದಣಿ ಮಾಡಲು ಪತ್ರಿಕೆಯ ಹೆಸರುಗಳು: ಕರ್ನಾಟಕ ಪರಿಸರ ವಾಹಿನಿ, ನವ ಪರಿಸರ ವಾಹಿನಿ, ನಮ್ಮ ಪರಿಸರ ವಾಹಿನಿ- ಇವುಗಳಲ್ಲಿ ಒಂದನ್ನು ಆಯ್ಕೆಮಾಡುವುದು) ಮಂಡಳಿಯಿಂದ ಮಾಡುವುದು. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪಕ್ರಿಯೆಗೆ ಚಾಲನೆ ಕೊಡಲು ಸಂಪಾದಕರು ಇದನ್ನು ನಿರ್ವಹಿಸುವುದು. ಈ ಪತ್ರಿಕೆಯ ಸಂಪಾದಕ ಜವಾಬ್ದಾರಿಯನ್ನು ಆರ್.ಜಿ. ಹಳ್ಳಿ ನಾಗರಾಜ್ ಅವರಿಗೆ ವಹಿಸುವುದು.<br>4) ನೋಂದಣಿ ಬಂದನಂತರ "ಪರಿಸರ ವಾಹಿನಿ" ಮತ್ತು "ಮರಿದುಂಬಿ"ಗಳನ್ನು ಪತ್ರಿಕೆಯನ್ನು ಒಂದೇ ಸಂಚಿಕೆಯಲ್ಲಿ ತ್ರೈಮಾಸಿಕವಾಗಿ ಪ್ರಕಟಿಸುವುದು.<br>5) ಮಂಡಳಿಯಿಂದ "ಪರಿಸರ ವಾಹಿನಿ" ತ್ರೈಮಾಸಿಕಕ್ಕೆ ಪತ್ರಿಕೆಗೆ ಲೇಖನ ಕೊಡುವ ವಿಧ್ವಾಂಸರಿಗೆ ಗೌರವ ಧನ ರೂ.1000/- ರಿಂದ ರೂ.2000/-ವರೆಗೆ ನಿಗದಿಪಡಿಸಲಾಯಿತು.<br>6) ಮಂಡಳಿಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ, ಆಡಳಿತಾಧಿಕಾರಿ ಮತ್ತು ಹಿರಿಯ ಪರಿಸರ ಅಧಿಕಾರಿ, ಜಾಗೃತಿ ಕೋಶ, ಇವರುಗಳನ್ನೊಳಗೊಂಡಂತೇ ಸಂಪಾದಕ ಮಂಡಳಿಯನ್ನು ರಚಿಸಲಾಯಿತು. ಈ ಕೆಳಕಂಡವರನ್ನು ನಾಮನಿರ್ದೇಶನ ಮಾಡಿತು:<br>i) ಶ್ರೀ. ಆರ್.ಜಿ. ಹಳ್ಳಿ ನಾಗರಾಜ್, ಸಂಪಾದಕರು.<br>ii) ಶ್ರೀ. ನಾಗೇಶ ಹೆಗಡೆ,, ಸಂಪಾದಕರು, ,"ಮರಿದುಂಬಿ".<br>iii) ಶ್ರೀಮತಿ. ಸುಮಂಗಲ ಮಮ್ಮಿಗಟ್ಟಿ, ಕಾರ್ಯಕ್ರಮದ ಕಾರ್ಯನಿರ್ವಾಹಕಿ (ಎಫ್‌ಎಮ್ ವಿಜ್ಞಾನ).<br>iv) ಡಾ. ಎಂ. ವೆಂಕಟಸ್ವಾಮಿ, ಭೂಗರ್ಬಶಾಸ್ತ್ರ ತಜ್ಞರು.<br>v) ಡಾ. ರಮೇಶ್ ಕಾಮತ್, ಆಹ್ವಾನಿತರು, ಜಾಗೃತಿ ಸಮಿತಿ.<br>vi) ಡಾ. ಟಿ. ಎಸ್. ವಿವೇಕಾನಂದ, ಪರಿಸರ ತಜ್ಞರು.<br>vii) ಡಾ. ಲಕ್ಷ್ಮಿಕಾಂತ್, ಆಹ್ವಾನಿತರು, ಜಾಗೃತಿ ಸಮಿತಿ, ಹಾಗೂ ಮಂಡಳಿಯ ಸದಸ್ಯರು (Non-Official)<br><br>**ಕ್ರಮ: ಶ್ರೀ.ಆರ್.ಜಿ.ಹಳ್ಳಿ ನಾಗರಾಜ್, ಸಾರ್ವಜನಿಕ ಸಂಪರ್ಕ ಅಧಿಕಾರಿ ಮತ್ತು ಆಡಳಿತ ಅಧಿಕಾರಿ** |

| | | |
|---|---|---|
| 7.2 | **ಮಂಡಳಿಯಿಂದ ವಸ್ತು ಪ್ರದರ್ಶನ ಮತ್ತು ಜಾಗೃತಿ ಕಾರ್ಯಕ್ರಮಗಳಿಗೆ ಸೂಕ್ತ ಪರಿಸರ ಸಾಮಗ್ರಿಗಳನ್ನು ಸಿದ್ಧ ಪಡಿಸುವ ಬಗ್ಗೆ.**<br>ಮಂಡಳಿಯು ಪ್ರತಿ ವರ್ಷ Calendar of Events ಪ್ರಕಾರ ಪರಿಸರಕ್ಕೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತದೆ. ಈ ಕಾರ್ಯಕ್ರಮಗಳಿಗೆ ಸೂಕ್ತ ಪರಿಸರ ವಿಷಯಕ್ಕೆ ಸಂಬಂಧಿಸಿದಂತೆ ಜನಜಾಗೃತಿ ಮೂಡಿಸಲು ವಸ್ತು ಪ್ರದರ್ಶನ ಅಥವಾ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲು ಜಾಗೃತಿ ಸಾಮಗ್ರಿಗಳನ್ನು ಸಿದ್ಧಪಡಿಸಬೇಕಾಗಿರುತ್ತದೆ. ಈ ಹಿಂದೆ ಸಿದ್ಧಪಡಿಸಿದ ಸಾಮಗ್ರಿಗಳು ಹಳೆಯದಾಗಿದ್ದು ಹೊಸದಾಗಿ ಚಿತ್ರೀಕರಣ ಮತ್ತು ಜಾಗೃತಿ ಮೂಡಿಸುವ ಸಂದೇಶವನ್ನು ಈಗ ಸಿದ್ಧಪಡಿಸುವ ಅವಶ್ಯಕತೆ ಇರುತ್ತದೆ.<br>ಇತ್ತೀಚೆಗೆ ಸರ್ಕಾರದ ಮಟ್ಟದಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ, ಮಂಡಳಿಯಿಂದ ಭಾಗವಹಿಸುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಸ್ತುಪ್ರದರ್ಶನ ಅಥವಾ ಜಾಗೃತಿ ಸಂದೇಶ ಹೊತ್ತ ಬ್ಯಾನರ್‌ಗಳು, Display Board Standಗಳನ್ನು ಮಾಡಿಸುವ ಅವಶ್ಯಕತೆ ಇರುತ್ತದೆ.<br>ಈ ಎಲ್ಲಾ ಸಂಬಂಧಿಸಿದ ವಿಷಯಗಳನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ವಿವಿಧ ಪರಿಸರ ವಿಷಯ ಕುರಿತಾದ ವಸ್ತು ಪ್ರದರ್ಶನಗಳಲ್ಲಿ ಮಂಡಳಿಯು ಭಾಗವಹಿಸಲು ಅನುಕೂಲವಾಗುವಂತೇ ವಿಷಯಾಧಾರಿತ ಸುಮಾರು 200 Display Boardಗಳನ್ನು ಹಂತ ಹಂತವಾಗಿ ಸಿದ್ಧಪಡಿಸಲು ಸಭೆಯು ಅನುಮೋದಿಸಿತು.<br><br>**ಕ್ರಮ: ಹಿರಿಯ ಪರಿಸರ ಅಧಿಕಾರಿ, ಜಾಗೃತಿ ಕೋಶ, ಸಾರ್ವಜನಿಕ ಸಂಪರ್ಕ ಅಧಿಕಾರಿ ಮತ್ತು ಆಡಳಿತ ಅಧಿಕಾರಿ.** |
| 7.3 | **ನವಚೇತನ ಟ್ರಸ್ಟ್ (ರಿ), 10ನೇ ಮಹಡಿ, ಟವರ್ ಬ್ಲಾಕ್, ಯುನಿಟಿ ಬಿಲ್ಡಿಂಗ್ಸ್, ಜೆ.ಸಿ.ರಸ್ತೆ, ಬೆಂಗಳೂರು–560002.**<br>ಶ್ರೀ.ವಿ.ಶ್ರೀನಿವಾಸ ರಾಜು, ಮ್ಯಾನೇಜಿಂಗ್ ಟ್ರಸ್ಟಿ, ನವಚೇತನ ಟ್ರಸ್ಟ್, ಇವರ ಪತ್ರ ದಿನಾಂಕ:11.09.2015ರಲ್ಲಿ ಶ್ರೆಡ್ಡರ್‌ರನ್ನು ಖರೀದಿಸಲು ಮಂಡಳಿಯಿಂದ ಆರ್ಥಿಕ ಸಹಾಯಕವನ್ನು ನೀಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಈ ಶ್ರೆಡ್ಡರ್ ಉದ್ಯಾನವನದಲ್ಲಿ ಸ್ಥಾಪಿಸಲಾಗಿ, ಸಾವಯವ ತ್ಯಾಜ್ಯಾ ನಿರ್ವಹಣೆ ಮಾಡಲು ಉಪಯೋಗಿಸಿ, ಸಾರ್ವಜನಿಕರಿಗೆ ಪ್ರದರ್ಶನವಾಗುತ್ತದೆ ಎಂದು ತಿಳಿಸಿದ್ದಾರೆ. ಇವರ ಪತ್ರದೊಂದಿಗೆ 03 ಬಗೆಯ ಶ್ರೆಡ್ಡರ್‌ಗೆ 03 ವಿವಿಧ ಉದ್ಯಮಗಳಿಂದ ಪಡೆದ ಬೆಲೆಯನ್ನು ತಿಳಿಸಿರುತ್ತಾರೆ.<br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ನವಚೇತನ ಟ್ರಸ್ಟ್ (ರಿ), 10ನೇ ಮಹಡಿ, ಟವರ್ ಬ್ಲಾಕ್, ಯುನಿಟಿ ಬಿಲ್ಡಿಂಗ್ಸ್, ಜೆ.ಸಿ.ರಸ್ತೆ, ಬೆಂಗಳೂರು–560002, ಇವರಿಗೆ ಉದ್ಯಾನವನದಲ್ಲಿ ಸಾವಯವ ತ್ಯಾಜ್ಯ ನಿರ್ವಹಣೆಗಾಗಿ ಶ್ರೆಡ್ಡರ್ ಖರೀದಿಸಲು ರೂ.58,000/– ನೀಡಲು ಅನುಮೋದಿಸಲಾಯಿತು.<br><br>**ಕ್ರಮ: ಹಿರಿಯ ಪರಿಸರ ಅಧಿಕಾರಿ, ತ್ಯಾಜ್ಯ ನಿರ್ವಹಣಾ ಕೋಶ.** |
| 7.4 | **2015–16ನೇ ಸಾಲಿನ ಚಿತ್ರದುರ್ಗ ಜಿಲ್ಲೆಯಲ್ಲಿನ ಸರ್ಕಾರಿ/ಖಾಸಗಿ, ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳಲ್ಲಿ "ಪರಿಸರ ಮಿತ್ರ ಶಾಲಾ ಕಾರ್ಯಕ್ರಮ" ನಡೆಸುವ ಕುರಿತು.**<br>"ಪರಿಸರ ಮಿತ್ರ ಶಾಲಾ 2015–16"ರ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಬದಲಾಗಿ "ಚಿತ್ರದುರ್ಗ ಜಿಲ್ಲಾ ವಿಜ್ಞಾನ ಕೇಂದ್ರ"ಇವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಮಾರ್ಗದರ್ಶನ ನೀಡುವುದು ಅಥವಾ 2015–16ನೇ ಸಾಲಿನಲ್ಲಿ "ಪರಿಸರ ಮಿತ್ರ ಶಾಲಾ" ಕಾರ್ಯಕ್ರಮಕ್ಕೆ ಮಂಜೂರಾಗಿರುವ ಹಣವನ್ನು 2016–17ನೇ ಸಾಲಿನ | ಸಮಿತಿಯು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಚಿತ್ರದುರ್ಗ, ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್, ಮತ್ತು ಭಾರತ ಸ್ಕೌಟ್ಸ್ & ಗೈಡ್ಸ್, ಚಿರ್ತದುರ್ಗ ಅವರ ಸಹಯೋಗದೊಂದಿಗೆ 2016–17ನೇ ವರ್ಷದ "ಪರಿಸರ ಮಿತ್ರ ಶಾಲೆ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಮೋದಿಸಿತು.<br><br>**ಕ್ರಮ: ಪರಿಸರ ಅಧಿಕಾರಿ, ಚಿತ್ರದುರ್ಗ.** |

| | | |
|---|---|---|
| | "ಪರಿಸರ ಮಿತ್ರ ಶಾಲಾ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸದುಪಯೋಗಪಡಿಸಲು ಅವಕಾಶ ನೀಡುವುದು.<br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | |
| 7.5 | **ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, "ವಿಜ್ಞಾನ ಭವನ", ಸಂಖ್ಯೆ:24/2,21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560070.**<br>ಡಾ.ವಸುಂದರ ಭೂಪತಿ, ಗೌರವಾನ್ವಿತ ಕಾರ್ಯದರ್ಶಿ, ಕ.ರಾ.ವಿ.ಪ., ಇವರ ಪತ್ರ ದಿನಾಂಕ:19.09.2015ರಲ್ಲಿ "ಅಂತರಾಷ್ಟ್ರೀಯ ಮಣ್ಣಿನ ವರ್ಷ" ಎಂಬ ಪ್ರಸ್ತಾವನೆಯನ್ನು ರಾಜ್ಯಾದ್ಯಂತ ಕಾರ್ಯಗತಗೊಳಿಸಲು ಆರ್ಥಿಕ ಸಹಾಯವನ್ನು ನೀಡಬೇಕೆಂದು ಸರ್ಕಾರದ ಕಾರ್ಯದರ್ಶಿ,(ಪರಿಸರ ಮತ್ತು ಜೀವಿಶಾಸ್ತ್ರ) ಪ್ರಸ್ತಾವನೆಯನ್ನು ಪರಿಶೀಲಿಸಲು ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಗೆ ಕಳುಹಿಸಿರುತ್ತಾರೆ.<br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ಸಮಿತಿಯು ಸಮಾಲೋಚನೆ ನಂತರ ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 7.6 | **ಉದಯವಾಣಿ, ಮಣಿಪಾಲ್ ಮೀಡಿಯ ನೆಟ್‌ವರ್ಕ್, ಲಿಮಿಟೆಡ್, ಬೆಂಗಳೂರು.**<br>ಉದಯವಾಣಿ, ಮಣಿಪಾಲ್ ಮೀಡಿಯ ನೆಟ್‌ವರ್ಕ್, ಲಿಮಿಟೆಡ್, ಬೆಂಗಳೂರು, ಇವರ ಪತ್ರ ದಿನಾಂಕ:07.10.2015ರಲ್ಲಿ ದೀಪಾವಳಿ 2015 ಆವೃತ್ತಿಯಲ್ಲಿ ಒಂದು ಪುಟ ಜಾಹೀರಾತಿಗೆ ಆರ್ಥಿಕ ಸಹಾಯಕವನ್ನು ಮಂಡಳಿಯಿಂದ ನೀಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ.<br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ಸಮಿತಿಯು ಸಮಾಲೋಚನೆ ನಂತರ ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 7.7 | **ರೈನ್‌ಟ್ರೀ ಮೀಡಿಯ ಪ್ರೈವೇಟ್ ಲಿಮಿಟೆಡ್, ಟಿಎಫ್-9 ಬಿಸ್‌ನೆಸ್ ಪ್ಯಾಂಟ್, 137 ಬ್ರಿಗೇಡ್ ರಸ್ತೆ, ಬೆಂಗಳೂರು-560025.**<br>ರಾಜ್ಯಸಭಾ ಸದಸ್ಯರಾದ ಪ್ರೋ.ಎಂ.ವಿ.ರಾಜೀವ ಗೌಡ ಇವರ ಪತ್ರ ದಿನಾಂಕ:15.09.2015ರಲ್ಲಿ, ರೀಸರ್ಜೆಂಟ್ ಕರ್ನಾಟಕ 2016 ಪುಸ್ತಕದಲ್ಲಿ ಜಾಹೀರಾತಿಗೆ ಆರ್ಥಿಕ ಸಹಾಯವನ್ನು ಮಂಡಳಿಯಿಂದ ನೀಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಈ ಪುಸ್ತಕವನ್ನು "ಇನ್ ವೆಸ್ಟ್ ಕರ್ನಾಟಕ" ಎಂಬ ಸಮಾರಂಭದಲ್ಲಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿರುತ್ತಾರೆ.<br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸಿ ರೂ.1,50,000/-ಯನ್ನು ಮಂಡಳಿಯಿಂದ ನೀಡಲು ಅನುಮೋದಿಸಿತು.<br><br>**ಕ್ರಮ: ಸಾರ್ವಜನಿಕ ಸಂಪರ್ಕ ಅಧಿಕಾರಿ.** |
| 7.8 | **Prof. & Head, Neurosurgery Dept, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.**<br>Prof. & Head, Neurosurgery Dept, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋದನ ಕೇಂದ್ರ, ಬೆಂಗಳೂರು ಇವರ ಪತ್ರ ದಿನಾಂಕ:25.10.2015ರಲ್ಲಿ, ರಸ್ತೆ ಸಂಚಾರ ಅಪಘಾತ ತಡೆ ಕುರಿತು ಸಾಕ್ಷ್ಯಚಿತ್ರವನ್ನು ತಯಾರಿಸಲು | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |

| | | |
|---|---|---|
| | ರೊ.2,00,000/-(ಎರಡು ಲಕ್ಷಗಳನ್ನು) ಮಂಡಳಿಯಿಂದ ಆರ್ಥಿಕ ಸಹಾಯವಾಗಿ ನೀಡಬೇಕೆಂದು ಮನವಿ ಮಾಡಿರುತ್ತಾರೆ.<br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | |
| 7.9 | **ಈ ಸಂಜೆ, ಕನ್ನಡ ಸಂಜೆ ದಿನ, ಬೆಂಗಳೂರು.**<br>ಈ ಸಂಜೆ, ಕನ್ನಡ ಸಂಜೆ ದಿನ, ಬೆಂಗಳೂರು, ಇವರ ಪತ್ರ ದಿನಾಂಕ:30.10.2015ರಲ್ಲಿ, ವಿಶೇಷ ಆವೃತ್ತಿ, ದೀಪಾವಳಿ ಹಬ್ಬ-2015 ಇದರಲ್ಲಿ ಜಾಹೀರಾತಿಗೆ ರೊ.37,000/-(ಮೂವತ್ತೇಳು ಸಾವಿರಗಳನ್ನು) ಮಂಡಳಿಯಿಂದ ಆರ್ಥಿಕ ಸಹಾಯವಾಗಿ ನೀಡಬೇಕೆಂದು ಮನವಿ ಮಾಡಿರುತ್ತಾರೆ.<br><br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |
| 7.10 | **ಕರ್ನಾಟಕ ಪ್ರಾಂತ್ಯ ಕೃಷಿ ಕೂಲಿಕಾರ ಸಂಘ, ಬೆಂಗಳೂರು.**<br>ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇವರ ಪತ್ರ ದಿನಾಂಕ:17.11.2015ರಲ್ಲಿ, ವಿಶೇಷ ಸಂಚಿಕೆಯಲ್ಲಿ ಒಂದು ಪುಟ ಜಾಹೀರಾತು ನೀಡಲು ರೂ.10,000/- (ಹತ್ತು ಸಾವಿರಗಳನ್ನು) ಮಂಡಳಿಯಿಂದ ಆರ್ಥಿಕ ಸಹಾಯವಾಗಿ ನೀಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಈ ವಿಶೇಷ ಸಂಚಿಕೆಯನ್ನು "ವಲಸೆ ಕೂಲಿಕಾರ ಸಮಾವೇಶ 19-20 ಜನವರಿ 2016" ಸಮಯದಲ್ಲಿ ಬಿಡುಗಡೆ ಮಾಡಲಾಗುವುದು ಮತ್ತು ಸದರಿ ಸಮಾವೇಶವನ್ನು ಕರ್ನಾಟಕ ಪ್ರಾಂತ್ಯ ಕೃಷಿ ಕೂಲಿಕಾರ ಸಂಘದವರು ಏರ್ಪಾಡು ಮಾಡುವರು ಎಂದು ತಿಳಿಸಿರುತ್ತಾರೆ.<br><br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ಕರ್ನಾಟಕ ಪ್ರಾಂತ್ಯ ಕೃಷಿ ಕೂಲಿಕಾರ ಸಂಘ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಪರಿಗಣಿಸಿ ಇವರಿಗೆ ವಿಶೇಷ ಸಂಚಿಕೆಯಲ್ಲಿ ಒಂದು ಪುಟ ಜಾಹಿರಾತಿಗಾಗಿ ರೂ.10,000/-ನೀಡಲು ಸಮಿತಿಯು ಅನುಮೋದಿಸಿತು.<br><br>**ಕ್ರಮ: ಸಾರ್ವಜನಿಕ ಸಂಪರ್ಕ ಅಧಿಕಾರಿ** |
| 7.11 | **ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಗಾ.ಕೃ.ವಿ.ಕೇ., ಬೆಂಗಳೂರು-560065.**<br>ಡಾ.ವಿ.ಆರ್.ರಾಮಕೃಷ್ಣ ಪರಮ, ಪ್ರೋ.&ಮುಖ್ಯ ಹಾಗೂ ಸಂಘಟನಾ ಕಾರ್ಯದರ್ಶಿ, ಮಣ್ಣಿನ ವಿಜ್ಞಾನ ಇಲಾಖೆ ಮತ್ತು ಕೃಷಿ ವಿಜ್ಞಾನ, ಗಾ.ಕೃ.ವಿ.ಕೇ., ಬೆಂಗಳೂರು ಇವರ ಪತ್ರ ದಿನಾಂಕ:16.11.2015ರಲ್ಲಿ, ವಿಶ್ವ ಮಣ್ಣಿನ ದಿನದಂದು ಮಣ್ಣಿನ ವಿಜ್ಞಾನ ಭಾರತೀಯ ಸೊಸೈಟಿಯ 80ನೇ ವಾರ್ಷಿಕ ಸಮ್ಮೇಳನವನ್ನು ನಡೆಸುತ್ತಿರುವುದರಿಂದ, ಈ ಕಾರ್ಯಕ್ರಮಕ್ಕೆ ಆರ್ಥಿಕ ಸಹಾಯವನ್ನು ಮಂಡಳಿಯಿಂದ ನೀಡಬೇಕೆಂದು ಮನವಿ ಮಾಡಿರುತ್ತಾರೆ.<br><br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ಸಮಿತಿಯು ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಧರಿಸಿತು. |

| | | |
|---|---|---|
| 7.12 | **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂ.ಪೆ.5159, ಬೆಂಗಳೂರು-560001.**<br>ಶ್ರೀ.ಎ.ಆರ್.ಉಡುಪ, ವ್ಯವಸ್ಥಾಪಕರು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಇವರ ಪತ್ರ ದಿನಾಂಕ:01.10.2015ರಲ್ಲಿ, ಹೊಸತು ಜನವರಿ 2016, ತಿಂಗಳ ಪತ್ರಿಕೆಯಲ್ಲಿ ಜಾಹೀರಾತಿಗೆ ಆರ್ಥಿಕ ಸಹಾಯವನ್ನು ಮಂಡಳಿಯಿಂದ ನೀಡಬೇಕೆಂದು ಮನವಿ ಮಾಡಿರುತ್ತಾರೆ.<br>ವಿಷಯವನ್ನು ಸಮಿತಿಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಂಡಿಸಿದೆ. | ಸಮಿತಿಯು ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂ.ಪೆ.5159, ಬೆಂಗಳೂರು-560001, ಇವರ ಪ್ರಸ್ತಾವನೆಯನ್ನು ಪರಿಗಣಿಸಿ ಇವರಿಗೆ "ಹೊಸತು" ಜನವರಿ-2016ರ ಸಂಚಿಕೆಯಲ್ಲಿ ಜಾಹಿರಾತಿಗಾಗಿ ರೂ.30,000/- ನೀಡಲು ಅನುಮೋದಿಸಿತು.<br><br>**ಕ್ರಮ: ಸಾರ್ವಜನಿಕ ಸಂಪರ್ಕ ಅಧಿಕಾರಿ** |

**ಜಾಗೃತಿ ಸಮಿತಿ ಇತರೆ ವಿಷಯಗಳನ್ನು ಚರ್ಚಿಸಿ ಮಂಡಳಿಗೆ ಸೂಕ್ತ ಮಾರ್ಗದರ್ಶನ ನೀಡಿತು.**

1) ಶ್ರೀ. ನಾಗೇಶ್ ಹೆಗಡೆ,ಯವರ ಪುಸ್ತಕವನ್ನು ಮಂಡಳಿಯ ವತಿಯಿಂದ ಖರೀದಿಸಿ ಹಿ.ಪ.ಅ.ರವರ ಕಛೇರಿ ಮತ್ತು ಮಂಡಳಿಯ ಗ್ರಂಥಾಲಯ-ಹೀಗೆ ಎಲ್ಲ ಕಡೆಗೆ ವಿತರಿಸಲು ಅನುಕೂಲವಾಗುವಂತೇ 75 ಪುಸ್ತಕಗಳನ್ನು ಖರೀದಿಸಲು ತೀರ್ಮಾನಿಸಲಾಯಿತು. **(ಕ್ರಮ: ಆಡಳಿತಾಧಿಕಾರಿ)**
2) ನಿಸರ್ಗ ಭವನದಲ್ಲಿ ಗ್ರಂಥಾಲಯ ಸ್ಥಾಪಿಸುವ ಬಗ್ಗೆ ತೀರ್ಮಾನಿಸಲಾಯಿತು. **(ಕ್ರಮ: ಆಡಳಿತಾಧಿಕಾರಿ)**
3) ಡಾ. ಕೇಶವ್ ಎ. ಬುಲ್‌ಬುಲೇ,ಇವರು ಬೆಂಗಳೂರು, ಮಂಡ್ಯ, ಮೈಸೂರು, ಚಿಕ್ಕೋಡಿ, ದಾವಣಗೆರೆ, ಶಿವಮೊಗ್ಗ ಹಾಗೂ ಹೈದರಾಬಾದ್ ಮತ್ತು ವಿಶಾಖಪಟ್ಟಣದಲ್ಲಿ ಕೆಲವು ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯುನ್ಮಾನ ತ್ಯಾಜ್ಯ ಮರುಬಳಕೆ ಮತ್ತು ಪರಿಸರ ಸಂರಕ್ಷಣೆ, ನಗರ ಗಣಿಗಾರಿಕೆ ಮತ್ತು ಪರಿಸರ ಸಂರಕ್ಷಣೆ, ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್‌ಗಳಲ್ಲಿರುವ ಲೋಹಗಳನ್ನು ಪುನರ್ ಬಳಸುವ ವಿಧಾನ, ಈ ವಿಷಯಗಳ ಕುರಿತು ಉಪನ್ಯಾಸ ನೀಡಿ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಿದ್ದಾರೆ; ಜಾಗೃತಿ ಸಮಿತಿಯು ಜಾಗೃತಿ ಉಪನ್ಯಾಸ ನೀಡಿರುವುದನ್ನು ಅಭಿನಂದಿಸಿತು.
4) ಇನ್ನು ಮುಂದೆ ಈ ಬಗ್ಗೆ ಮಂಡಳಿಯಿಂದ, ನಮ್ಮ ಸದಸ್ಯರು ನಿರ್ವಹಿಸುವ ಈ ಕಾರ್ಯಕ್ರಮಗಳಿಗೆ ಎಲ್ಲಾ ರೀತಿಯ ಸಹಾಯ(Logistics) ಮಾಡಲು ನಿರ್ಧರಿಸಿತು.

ಜಾಗೃತಿ ಸಮಿತಿಯ ಸಭೆಯನ್ನು ಅಧ್ಯಕ್ಷರಿಗೆ, ಸದಸ್ಯರಿಗೆ ಮತ್ತು ಆಹ್ವಾನಿತರಿಗೆ ವಂದಿಸುತ, ಮುಕ್ತಾಯಗೊಳಿಸಲಾಯಿತು.

**ಶ್ರೀ.ಮೋಹನ್‌ಕುಮಾರ್ ಕೊಂಡಜ್ಜಿ**
**ಅಧ್ಯಕ್ಷರು, ಜಾಗೃತಿ ಸಮಿತಿ,**
**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,**
**ಬೆಂಗಳೂರು.**